# ನಿಜ್ಞಂ ಪೊಸತು

ಪ್ರಾಚೀನ ಕನ್ನಡ ಸಾಹಿತ್ಯದ ಸ್ವರೂಪವನ್ನು ನಿರ್ಣಯಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿರುವುದು ಸಂಸ್ಕೃತ ಭಾಷೆ ಮತ್ತು ಸಾಹಿತ್ಯ. ಕನ್ನಡ ಕವಿಗಳು ಕಾವ್ಯವಸ್ತುವನ್ನು ಜೈನ ಪುರಾಣ ಹಾಗೂ ಮಹಾಭಾರತದಿಂದ ಆಯ್ದುಕೊಂಡರೂ, ಹಳಗನ್ನಡ ಕಾವ್ಯಾಭಿವ್ಯಕ್ತಿಗೆ ವಿಶೇಷವಾದ ಶಕ್ತಿ ದೊರೆತದ್ದು ಸಂಸ್ಕೃತದಿಂದಲೇ ಎನ್ನಬೇಕಾಗುತ್ತದೆ. 'ಚಂಪೂ' ಎಂಬ ಪ್ರಕಾರದಲ್ಲಿ ಮಹಾಕಾವ್ಯಗಳನ್ನು ರಚಿಸಿದ ಕವಿಗಳು ಛಂದಸ್ಸು, ಭಾಷೆ/ಶೈಲಿಯಲ್ಲಿ ತೋರಿದ ಸಾಧನೆ ದೊಡ್ಡದು. ಅದರಲ್ಲೂ ಹತ್ತನೆಯ ಶತಮಾನದಲ್ಲಿ ಸಂಸ್ಕೃತ ಮೂಲದ ಖ್ಯಾತ ಕರ್ನಾಟಕ ವೃತ್ತಗಳಲ್ಲಿ ಬೆಳೆಯುವ ಕಥಾನಕಗಳು ವಸ್ತು ಮತ್ತು ಭಾಷೆಯ ದೃಷ್ಟಿಯಿಂದ 'ಮಾರ್ಗ' ಕಾವ್ಯಗಳೆನಿಸಿದವು. ಅಷ್ಟಾದಶವರ್ಣನೆಗಳಿಗೆ ಅನುಕೂಲವಾಗಬಲ್ಲ ಕತೆಗಳನ್ನು, ಕಥಾನಾಯಕರನ್ನು ಆಯ್ದುಕೊಂಡು ಕೃತಿರಚನೆ ಮಾಡಬೇಕೆಂಬ ಚೌಕಟ್ಟು ಮಾರ್ಗ ಪರಂಪರೆಯ ಕವಿಗಳಿಗೆ ಸಾಮಾನ್ಯ ಕಾವ್ಯ ಸೂತ್ರವೆನಿಸಿತು. ರಾಜರ ಆಸ್ಥಾನದಲ್ಲಿದ್ದ ಪಂಡಿತಮಂಡಳಿಯ ಅಭಿರುಚಿ, ಪ್ರತಿಷ್ಠೆಗಳಿಗೆ ಅನುಸಾರವಾಗಿ ಪ್ರೌಢ ಭಾಷೆಯ ಪ್ರಾಚುರ್ಯ ಬೆಳೆಯಿತು. ಈ ಬಗೆಯ ಅನೇಕ ನಿರ್ಬಂಧಗಳ ನಡುವೆ ತಮ್ಮ ಸ್ವತಂತ್ರ ಮನೋಧರ್ಮವನ್ನು ಮೆರೆದ ಕವಿಗಳೂ ಇದ್ದಾರೆ. ಕೇವಲ ಸಂಸ್ಕೃತ, ಪ್ರಾಕೃತ ಸಾಹಿತ್ಯವನ್ನು ಅನುಕರಿಸದೆ, ಚಂಪೂವಿನಲ್ಲಿ ಮಾರ್ಗ–ದೇಸಿಗಳ ಸಮನ್ವಯವನ್ನು ಸಾಧಿಸಿರುವುದುಂಟು. ಪಂಪ 'ಬಗೆಪೊಸದಪ್ಪುದಾಗಿ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು' ಎಂದಿದ್ದಾನೆ. ಕಾವ್ಯ ಪಂಡಿತರಿಗೆ, ಜನ ಸಾಮಾನ್ಯರಿಗೆ ಪ್ರಿಯವಾಗಬೇಕಾದರೆ ಅಲ್ಲಿ ಮಾರ್ಗ–ದೇಸಿಯ ಒಡಂಬಡಿಕೆಯಾಗಬೇಕು ಎಂಬುದು ಪಂಪನ ನಿಲುವಾಗಿತ್ತು. ಆತ ಆರಂಭಿಸಿದ ಲೌಕಿಕ ಕಾವ್ಯ ಪರಂಪರೆ ಹಾಗೂ ಭಾಷಾಪ್ರಜ್ಞೆ ಒಂದನೆಯ ನಾಗವರ್ಮನಲ್ಲಿಯೂ ಮೇಳೈಸಿದೆ ಎನ್ನಬಹುದು.

ಪಂಪ, ರನ್ನ, ನಾಗಚಂದ್ರರಂಥ ಕವಿಗಳು ಕಾಳಿದಾಸ, ಬಾಣ–ಈ ಇಬ್ಬರ ಪ್ರತಿಭಾವಿಲಾಸಕ್ಕೆ ಬೆರಗಾದದ್ದು, ಮಾರುಹೋದದ್ದು ಹೆಚ್ಚು. ಹೀಗಾಗಿ, ಗದ್ಯಪದ್ಯ ಮಿಶ್ರಿತವಾದ ಚಂಪೂ ಕಾವ್ಯಕ್ಕೆ ಅವರಿಬ್ಬರೂ ಮಾದರಿಯಾಗಿದ್ದಾರೆ. ಕನ್ನಡ ಕಾವ್ಯ ಪರಂಪರೆಯನ್ನು ಸೂಕ್ಷ್ಮವಾಗಿ ಗ್ರಹಿಸಿದರೆ ಅವುಗಳು ಆರಂಭವಾಗಿರುವುದೇ ಅನುವಾದ/ಪುನರ್ಲೇಖನ ಪ್ರಕ್ರಿಯೆಯಿಂದ ಎಂದು ಹೇಳಬೇಕಾಗುತ್ತದೆ. ಯಾವುದೇ ಒಂದು ಮೂಲ/ಆಕರವನ್ನು ಅದರ ಬಂಧಕ್ಕೆ ಚ್ಯುತಿ ಬರದ ಹಾಗೆ ಮತ್ತೊಂದು ಭಾಷೆಗೆ ತರುವುದು ಅತ್ಯಂತ ಕಷ್ಟದ ಕೆಲಸ. ಆದರೂ, ಇದು ಪರಂಪರೆಯ ಮುಂದುವರಿಕೆಗೆ ಅಗತ್ಯ. ಆ ನಿಟ್ಟಿನಲ್ಲಿ ಬಾಣಭಟ್ಟನ ಕೃತಿಯನ್ನು ಅನುವಾದಿಸಿದ ಮೊದಲಿಗನೆಂದರೆ ಒಂದನೆಯ ನಾಗವರ್ಮ.

'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬ ಪ್ರಚಲಿತ ಉಕ್ತಿಯೊಂದಿದೆ. ಛಂದಸ್ಸು, ಅಲಂಕಾರದ ನೆರವಿನೊಂದಿಗೆ ಪದ್ಯದಲ್ಲಿ ಭಾವ/ಕಲ್ಪನೆಯನ್ನು ವಿಸ್ತರಿಸುವುದು ಸುಲಭ. ಆದರೆ, ವಾಸ್ತವ ವಿಚಾರಗಳನ್ನು ಪ್ರತಿಪಾದಿಸಲು ಗದ್ಯವೇ ಬೇಕಾಗುತ್ತದೆ. ಪ್ರಾಚೀನ ಕಾಲದಲ್ಲಿ ಬಾಣ, ಸುಬಂಧು, ದಂಡಿಯಂಥ ಕವಿಗಳು ಸಂಸ್ಕೃತದಲ್ಲಿ ಗ್ರಂಥಗಳನ್ನು ರಚಿಸಿದರು. ಅವರಲ್ಲಿ ಬಾಣನಿಗೆ ವಿಶೇಷ ಮಾನ್ಯತೆಯಿದೆ. ಏಳನೆಯ ಶತಮಾನದಲ್ಲಿ ಹರ್ಷನ ಆಸ್ಥಾನದಲ್ಲಿದ್ದ ಆತ, ಅಂದಿನ ಕಾಲದ ಸಾಂಸ್ಕೃತಿಕ ವೈಭವವನ್ನು ಕಥನದಲ್ಲಿ ಬಟ್ಟಿ ಇಳಿಸಿ, ಹೊಸ ಸಂಚಲನವನ್ನು ಮೂಡಿಸಿದ್ದಾನೆ. ಬ್ರಾಹ್ಮಣ ವಂಶಜನಾದ ಅವನ ತಂದೆ ಚಿತ್ರಭಾನು; ತಾಯಿ ರಾಜದೇವಿ. ಚಿಕ್ಕಂದಿನಲ್ಲೇ ತಾಯಿ ತಂದೆಯನ್ನು ಕಳೆದುಕೊಂಡು, ದೇಶಪರ್ಯಟನ ಮಾಡಿ, ಅಸೂಯಾಪರ ವಿದ್ವಾಂಸರ ನಡುವೆಯೇ ಶ್ರೀ ಹರ್ಷನ ಮನ್ನಣೆಗೆ ಪಾತ್ರನಾದವನು. ಅವನ ಗ್ರಂಥಗಳಿವು: ಕಾದಂಬರಿ, ಹರ್ಷಚರಿತ, ಚಂಡಿಕಾಶತಕ, ಪಾರ್ವತೀಪರಿಣಯ, ರತ್ನಾವಲಿ. ಇವುಗಳಲ್ಲಿ ಕಾದಂಬರಿ ಲೋಕ ಪ್ರಸಿದ್ಧವಾಗಿದೆ; ಇದು ಗದ್ಯವೇ